## 26. 308 ಬಿಡಿಎ ನಿವೇಶನಗಳ ಹರಾಜು ಇಂದಿನಿಂದ

ಕೊರೋನಾ ಸನ್ನಿವೇಶದಲ್ಲಿ ರಾಜ್ಯದಲ್ಲಿ ಉಂಟಾಗಿರುವ ವಿತ್ತೀ ಕೊರತೆ ನೀಗಿಸಲು ಬಿಡಿಎ ತನ್ನ ಬೆಲೆ ಬಾಳುವ ನಿವೇಶನಗಳನ್ನು ಇ-ಹರಾಜು ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಹರಾಜು ಪ್ರಕ್ರಿಯೆ ಆರಂಭವಾಗಲಿದೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹರಾಜಿನಲ್ಲಿ ಭಾಗವಹಿಸುವವರು ರೂ.4 ಲಕ್ಷಗಳ (ಇಎಂಡಿ) ಠೇವಣಿ ಇಟ್ಟು ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಣಿ ಮಾಡಿಸಿಕೊಂಡವರು 308 ನಿವೇಶನಗಳಿಗೂ ಬಿಡ್ ಮಾಡಬಹುದಾಗಿದೆ.

ಒಟ್ಟು 5 ಹಂತದಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದ್ದು, ಮೊದಲ ಹಂತದಲ್ಲಿ 1 ರಿಂದ 75 ಸಂಖ್ಯೆವರೆಗಿನ ನಿವೇಶನಗಳ ಹರಾಜು ಆಗಸ್ಟ್ 6 ರಂದು ಆರಂಭವಾಗಲಿದೆ. 2ನೇ ಹಂತ 76–127ನೇ ಸಂಖ್ಯೆಯವರೆಗೆ ಇ-ಹರಾಜು ನಡೆಯಲಿದೆ. 3ನೇ ಹಂತ 128 ರಿಂದ 191, 4ನೇ ಮತ್ತು 5 ನೇ ಹಂತದಲ್ಲಿ ಹರಾಜು ಪ್ರಕ್ರಿಯೆ ಮುಗಿಯಲಿದೆ ಎಂದು ಬಿಡಿಎ ತಿಳಿಸಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:20.07.2020